## ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

ಸಿ.ಸಿ.ನಂಃ 14582/2001

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದಮಲ್ಲಪ್ಪ |
| ತಂದೆಯ/ಗಂಡನ ಹೆಸರು | ಲೇಟ್ ಪುಟ್ಟ ರಾಮೇಗೌಡ |
| ವಯಸ್ಸು | 69 ವರ್ಷ |
| ಉದ್ಯೋಗ | ನಿವೃತ್ತ ಡಿ.ವೈ.ಎಸ್.ಪಿ |
| ವಾಸ | ಡಿ.ಎಂ.ಕೆ ಕುರ್ಕೆ, ಅರಸಿಕೆರೆ ತಾಲ್ಲೂಕು, ಹಾಸನ |

**ದಿನಾಂಕಃ 09-01-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.**
**ಮುಖ್ಯವಿಚಾರಣೆ ದಂ.ಸಂ.ಪ್ರ. ಕಲಂ 299 ರಡಿಯಲ್ಲಿ ಹಿರಿಯ ಸಸ ಅ ಅವರಿಂದಃ**

1. ದಿನಾಂಕಃ 25-07-2000 ರಿಂದ 15-06-2002 ರವರೆಗೆ ಬೆಂಗಳೂರು ನಗರದ ಕಮಿಷನರ್ ಕಛೇರಿ, ವಿಶೇಷ ವಿಭಾಗದಲ್ಲಿ , ವಿದೇಶಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ಸೆಂಟ್ರಲ್ ಆಫ್ರೀಕಾ ರಾಷ್ಟ್ರೀಯರಾದ ಮಾಲಿಕೊ ಲೆಗರ್ ಎಂಬುವವರು ಮನೆ ಸಂಖ್ಯೆ 776, 28 ನೇ ಮುಖ್ಯರಸ್ತೆ, 2 ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು ನಗರ-76 ಎಂಬ ವಿಳಾಸದಲ್ಲಿ ವಾಸವಿರುವುದಾಗಿ ತಿಳಿಸಿದ್ದರು. ಅವರ ಪಾಸ್ ಪೋರ್ಟ್ ಸಂಖ್ಯೆ 92/ಹೆಚ್.ಟಿ. 12719 ಆಗಿದ್ದು ದಿನಾಂಕಃ 11-01-1994 ರಿಂದ 01-10-2000 ರವರೆಗೆ ಮಾನ್ಯತೆ ಹೊಂದಿತ್ತು. ಅವರು ಪ್ಯಾರೀಸಿನ

ಭಾರತೀಯ ಎಂಬಸ್ಸಿರವರಿಂದ ದಿನಾಂಕಃ 28–10–1997 ರಂದು ವಿಸಾ ಕೂಡ ಪಡೆದುಕೊಂಡಿದ್ದು ಅದು ಒಂದು ವರ್ಷದ ಅವಧಿಗೆ ಆಗಿತ್ತು. ಸದರಿ ವಿಸಾ ಸಂಖ್ಯೆ 53674/97 ಆಗಿರುತ್ತದೆ. ಅವರು ಮೊದಲು ಪೂನದಲ್ಲಿ ವಾಸವಾಗಿದ್ದು, ಅಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೆ.

3. ತದನಂತರ ಪೂನದಿಂದ ಬೆಂಗಳೂರಿಗೆ ಬಂದು ನಮ್ಮ ಕಛೇರಿಯಲ್ಲಿ ವರದಿ ಮಾಡಿಕೊಂಡಿರುತ್ತಾರೆ. ಮಹವೀರ್ ಜೈನ್ ಕಾಲೇಜಿನಲ್ಲಿ ವಿಧ್ಯಾಭ್ಯಾಸ ಮಾಡುತ್ತಿರುವುದಾಗಿ ಮತ್ತು ಕೋರಮಂಗಲ ಪೊಲೀಸ್ ಠಾಣೆ ವಾಪ್ತಿಯಲ್ಲಿ ವಾಸ ಮಾಡಿರುವುದಾಗಿ ತಿಳಿಸಿರುತ್ತಾರೆ.

4. ಅವರು 29–10–1998 ರಿಂದ 28–10–1999 ರವರೆ ವಾಸ ವಿಸ್ತರಣಾ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸರ್ಕಾರದಿಂದ ಅದು ಮಂಜೂರಾಗಿ ಬಂದಿರುತ್ತದೆ. ಸದರಿಯವರ ವಿಸಾ ಅನುಮತಿ ಅವಧಿ ದಿನಾಂಕಃ 28–10–1999 ಕ್ಕೆ ಮುಕ್ತಾಯವಾಗಿರುತ್ತದೆ. ಅವರು ವಾಸ ವಿಸ್ತರಣಾ ಪಡೆಯದೆ ಅನಧೀಕೃತ ವಾಸವನ್ನು ಮುಂದುವರೆಸಿರುತ್ತಾರೆ. ಸದರಿಯವರ ಪಾರ್ಸ್ ಪೋರ್ಟ್ ಸಹ ದಿನಾಂಕಃ 01–10–2000 ಕ್ಕೆ ಮಾನ್ಯತೆ ಮುಕ್ತಯವಾಗಿರುತ್ತದೆ.

5. ಆದ್ದರಿಂದ ಸದರಿ ವಿದೇಶಿಯು ದಿನಾಂಕಃ 28–10–1999 ರಿಂದ ಸುಮಾರು 14 ತಿಂಗಳ ಕಾಲ ಅನಧೀಕೃತವಾಗಿ ವಾಸವಾಗಿರುತ್ತಾರೆ ಹಾಗೂ ಕೋರಮಂಗಲದಿಂದ ಬೇರೆ ವಿಳಾಸಕ್ಕೆ ವಾಸ ಬದಲಾಯಿಸಿಕೊಂಡಿದ್ದು, ಸದರಿ ಮಾಹಿತಿಯನ್ನು ನಮ್ಮ

ಕಛೇರಿಗೆ ತಿಳಿಸಿರುವುದಿಲ್ಲ. ಆದ್ದರಿಂದ ಸದರಿ ವಿದೇಶಿಯು ಕಲಂ 7(2) ರಿಜಿಸ್ಟ್ರೇಷನ್ ಆರ್ಡರ್ 1949, ಕಲಂ 14 ಫಾರಿನರ್ಸ್ ಆಕ್ಟ್ 1946, ರೂಲ್ 5 ಅಂಡ್ 6 ರಿಜಿಸ್ಟ್ರೇಷನ್ ಆಫ್ ರೂಲ್ಸ್ 1939 ಸಹವಾಚಕ ಕಲಂ 3, 5 ರಿಜಿಸ್ಟ್ರೇಷನ್ ಆಫ್ ಫಾರಿನರ್ಸ್ ಆಕ್ಟ್ 1939, ರೂಲ್ 5 ಪಾಸ್ ಪೋರ್ಟ್ ಎಂಟ್ರಿ ಇನ್ ಟು ಇಂಡಿಯಾ 1950 ರ ಪ್ರಕಾರ ದೂರನ್ನು ತಯಾರಿಸಿಕೊಂಡು ಸದರಿ ಆರೋಪಿ ವಿದೇಶಿಯನ್ನೂ ಸಹ ಕರೆದುಕೊಂಡು ಮೈಕೋಲೇಔಟ್ ಪೊಲೀಸ್ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ ಮತ್ತು ಸದರಿ ವಿದೇಶಿಯನ್ನು ಹಾಜರುಪಡಿಸಿರುತ್ತೇನೆ.

6. ಸಾಕ್ಷಿಯು ದೂರು ಮತ್ತು ದೂರಿನ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. ಆದ್ದರಿಂದ **ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.** ಮತ್ತೆ ಸದರಿ ವಿದೇಶಿ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ರಂಗೇಗೌಡ ಸಿ)
ಮು. ಮ. ಚಂ ನ್ಯಾ ಬೆಂ. ನಗರ.